ಸುಂದರವಾದ ಐಫೋನಿನಿಂದ ಬ್ರೆಕ್ಟನ ಫೋಟೋಗಳನ್ನು ಕ್ಲಿಕ್ಕಿಸುತ್ತಿದ್ದಳು. ಈ ವೇಳೆಯಲ್ಲಿ ವಿಮರ್ಶಕ ಸುಂದರ್ ಕತೆಯ ಬಗ್ಗೆ ಆರೇಳು ನಿಮಿಷ ಮಾತನಾಡಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡೈರೆಕ್ಟರ್ ಡಾ. ಸಿದ್ದೇಶ್ ಒಂದಿಪ್ಪತ್ತು ನಿಮಿಷಗಳಾದರೂ ಮಾತನಾಡಬೇಕೆಂದು ಬ್ರೆಕ್ಟನಿಗೆ ನಿರ್ದೇಶನ ಕೊಟ್ಟಿದ್ದರು. ಎದ್ದು ನಿಂತ ಬ್ರೆಕ್ಟನಿಗೆ ಎದುರಿನಲ್ಲಿಯೇ ನಗುತ್ತಾ ಕುಳಿತಿದ್ದ ಅನೂಹ್ಯಳನ್ನು ನೋಡಿ ಮಾತನಾಡುವ ಹುಮ್ಮಸ್ಸು ಇಮ್ಮಡಿಗೊಂಡಿತ್ತು. ಬ್ರೆಕ್ಟ್ ಮಾತನಾಡತೊಡಗಿದ: "ಹಿರಿಯರೇ, ಗೆಳೆಯ ಗೆಳತಿಯರೇ ಮತ್ತು ಒಡನಾಡಿಗಳೇ, ನಾವಿಂದು ವಿಚಿತ್ರ ಸನ್ನಿವೇಶದಲ್ಲಿ ಬದುಕುತ್ತಿದ್ದೇವೆ. ಜಾಗತೀಕರಣ ಇಂದು ಎಲ್ಲಾ ಕ್ಷೇತ್ರಗಳಲ್ಲೂ ಮನುಷ್ಯನನ್ನು ಹಿಂಡಿ ಹಿಪ್ಪೆ ಮಾಡುತ್ತಿದ್ದರೂ ದಮನಿತ ಸಮುದಾಯಗಳನ್ನು ಹೊಸ ಲೋಕಕ್ಕೆ ಪರಿಚಯಿಸುತ್ತಿದೆಯೆಂಬುದರಲ್ಲಿ ಎರಡು ಮಾತಿಲ್ಲ. ಭಾರತದಂಥ ಬಹುತ್ವದ ನಾಡಿನ ಬಹುದೊಡ್ಡ ಸಮಸ್ಯೆಯೆಂದರೆ ಜಾತಿ. ಇದು ಒಟ್ಟಾರೆ ಭಾರತದ ಅಭಿವೃದ್ಧಿಗೆ ಕಂಟಕಪ್ರಾಯವಾಗಿದೆ. ಮತ್ತು ಈ ಜಾತಿಪದ್ಧತಿಯ ವಿಚಿತ್ರ ಗುಣವೆಂದರೆ ಭಿನ್ನ ಜಾತಿಗಳು ಪರಸ್ಪರ ಸಂಘರ್ಷಕ್ಕಿಳಿಯುವುದರ ಜೊತೆಗೆ ಸ್ವಜಾತಿಯಲ್ಲಿನ ಆರ್ಥಿಕ ಅಸಮಾನತೆಗಳು ಸ್ವಜಾತಿಗಳಲ್ಲಿಯೇ ಅಗಾಧವಾದ ಕಂದಕಗಳನ್ನು ಸೃಷ್ಟಿಸುತ್ತಿರುವುದು. ಎಲ್ಲಾ ಜಾತಿಗಳಲ್ಲೂ ಶ್ರೀಮಂತರು ಮತ್ತು ಸುಶಿಕ್ಷಿತರು ತಮ್ಮದೇ ಜಾತಿಯ ಬಡವರನ್ನು ಮತ್ತು ಅನಕ್ಷರಸ್ಥರನ್ನು ಅಸ್ಪೃಶ್ಯರಂತೆ ಕಾಣುತ್ತಾರೆ. ನಮ್ಮ ಮುಂದಿರುವ ಬಹು ದೊಡ್ಡ ಚಾಲೆಂಜ್ ಇದೇ. ಮೀಸಲಾತಿ ಮತ್ತು ಇನ್ನಿತರ ಎಲ್ಲಾ ಸೌಲಭ್ಯಗಳು ಕೂಡ ಆಯಾ ಜಾತಿಗಳಲ್ಲಿನ ಉಳ್ಳವರ ಪಾಲಾಗುತ್ತಿವೆಯೇ ಹೊರತು ಬಡವರಿಗೆ, ಹಳ್ಳಿಯವರಿಗೆ ದಕ್ಕುತ್ತಿಲ್ಲ. ಭಾರತದ ಇವೊತ್ತಿನ ಸಂದರ್ಭದ ಬಹು ದೊಡ್ಡ ದುರಂತವೇ ಇದು. ಹಾಗಾಗಿ ಉಳ್ಳವರು ಇಲ್ಲದವರಿಗೆ ಅವಕಾಶ ನೀಡಲು ಮುಂದಾಗಬೇಕು. ಇದೇ ಸಮಾಜಕ್ಕೆ ನಾವು ಮಾಡಬಹುದಾದ ದೊಡ್ಡ ಉಪಕಾರ ಮತ್ತು ಸಾಧನೆ. ಜಾತಿ ಪದ್ಧತಿ ನಿರ್ಮೂಲನೆ ಅಷ್ಟು ಸುಲಭದ ಕೆಲಸವಲ್ಲ. ಎಲ್ಲಾ ಜಾತಿಗಳ ನಡುವೆ ದ್ವೇಷ ಅಸೂಯೆಗಳ ಸ್ಥಾನಗಳಲ್ಲಿ ಪ್ರೀತಿ, ವಿಶ್ವಾಸಗಳನ್ನು ಪ್ರತಿಷ್ಠಾಪಿಸಬೇಕಾಗಿದೆ. ಅಂತರ್ಜಾತಿ ಮದುವೆಗಳನ್ನು ಉತ್ತೇಜಿಸಬೇಕಾಗಿದೆಯಲ್ಲದೆ ಹೊಸ ತಲೆಮಾರಿನ ನಾವು ಹೆಣ್ಣು ಗಂಡೆಂಬ ಭೇದವಿಲ್ಲದೆ ಅಂತರ್ಜಾತಿ ಮದುವೆಗಳಿಗೆ ಒಡ್ಡಿಕೊಳ್ಳಬೇಕು. ನಮ್ಮ ಅನಕ್ಷರಸ್ಥ ಲೋಕಕ್ಕೆ ನಾವು ಜ್ಯೋತಿಗಳಂತೆ ಬೆಳಕಾಗಬೇಕು. ನಮ್ಮ ಆಚರಣೆಗಳಲ್ಲಿ, ಸಾಹಿತ್ಯದಲ್ಲಿ, ಆರ್ಥಿಕತೆಯಲ್ಲಿ ಮಾನವೀಯ ಒರತೆಗಳನ್ನು ಸೃಷ್ಟಿಸಬೇಕಾಗಿದೆ. ಇವೆಲ್ಲ ಆಗಬೇಕಾದರೆ ಪ್ರತಿಯೊಬ್ಬರೂ ಎದೆಗಳಲ್ಲಿ ಪ್ರೀತಿಯ, ವಿಶ್ವಾಸದ, ಸಮಾನತೆಯ ಬೆಳಕಿನ ಲಾಂದ್ರಗಳನ್ನು ಹಚ್ಚಿಕೊಂಡು ತಿರುಗಬೇಕು..." ಅನೂಹ್ಯಳೂ ಸೇರಿ ಸುಮಾರು ಜನ ಜೋರಾಗಿ ಚಪ್ಪಾಳೆ ತಟ್ಟಿದ್ದರಿಂದ ಬ್ರೆಕ್ಟನಿಗೆ ಮುಂದೆ ಮಾತನಾಡುವ ಲಹರಿ ಕಡಿದು ತುಂಡಾದಂತಾಗಿ "ನನ್ನನ್ನು ಸತ್ಕರಿಸಿದ ನಿಮಗೆಲ್ಲರಿಗೂ ಅಂತಃಕರಣದಿಂದ ವಂದಿಸುತ್ತೇನೆ" ಎಂದು ಮಾತು ಮುಗಿಸಿ ಸಭೆಗೆ ನಮಸ್ಕರಿಸಿ ಕುಳಿತುಕೊಂಡಿದ್ದ. ಅಧ್ಯಕ್ಷ ಸ್ಥಾನದಿಂದ ಡಾ. ಸಿದ್ದೇಶ್ "ಬ್ರೆಕ್ಟ್ ಭಾರತದ ಸಂದರ್ಭವನ್ನು ತಮ್ಮ ಮಾತುಗಳಲ್ಲಿ ಅದ್ಭುತವಾಗಿ ಬಿಚ್ಚಿಟ್ಟಿದ್ದಾರೆ. ಅವರು ಭವಿಷ್ಯದಲ್ಲಿ ಈ ನಾಡಿನ ಒಬ್ಬ ಶ್ರೇಷ್ಠ ಬರಹಗಾರರಾಗುತ್ತಾರೆಂಬುದು ಅವರ ಮಾತುಗಳಿಂದ ದೃಢಪಟ್ಟಿದೆ..." ಎಂದು ಚಿಕ್ಕದಾಗಿ, ಚೊಕ್ಕಟವಾಗಿ ಕೊಂಡಾಡಿದ್ದರು. ತಿಂಡಿ ಕಾಫಿಯ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ಬ್ರೆಕ್ಟ್ ಹಾಸ್ಟೆಲ್‌ಗೆ ಹಿಂತಿರುಗಿದಾಗ ಆರೂವರೆ ಗಂಟೆಯಾಗಿತ್ತು. ರೂಮ್‌ಮೇಟ್ ನರಸಿಂಹ ಮೂರ್ತಿ ಮತ್ತು ಇನ್ನಿಬ್ಬರು ಬ್ಯಾಚ್ಮೇಟುಗಳು "ಬ್ರದರ್ ಬ್ರೆಕ್ಟ್ ರೆಡಿಯಾಗು, ಕೆಂಗೇರಿಗೆ ಹೋಗಿ ಬರೋಣ. ರುಕ್ಮಿಣಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಸಣ್ಣ ಪಾರ್ಟಿ ಮಾಡ್ಕೊಂಡು ಬರೋಣ. ಊಟಕ್ಕೆ ಹಾಸ್ಟೆಲಿಗೇ ಬಂದ್ರಾಯ್ತು. ನೀನು ವಿಸ್ಕಿ ತಗೋತಿಯೋ ಬಿಯರ್ ತಗೋತಿಯೋ ನಿನ್ನಿಷ್ಟ. ನಮ್ಗೆ ಇವೊತ್ತು ತುಂಬಾ ಖುಷಿಯಾಗ್ತಿದೆ. ನಾವು ಸೆಲೆಬ್ರೇಟ್ ಮಾಡ್ಲೆ ಬೇಕು" ಎಂದಾಗ ಬ್ರೆಕ್ಟನಿಗೂ